ಶ್ರೀ ಕೆ. ಪ್ರಭಾಕರ್.—ಹೀಗೆ ಒಬ್ಬರಿಗೊಬ್ಬರು ಹೊಡೆದಾಡುವುದಕ್ಕೆ ಕಾರಣ ಏನು ? ವಿದ್ಯಾರ್ಥಿಗಳು ತಾವುತಾವೇ ಹೊಡೆದಾಡುವುದಕ್ಕೆ ಇದೇನು ಧತ್ತವೇ ? ಈ ಬಗ್ಗೆ ತಾವು ಕೊಟ್ಟಿರ ತಕ್ಕ ಹೇಳಿಕೆಯಿಂದ ಸಮಾಜಾಯಿಷಿ ಸಾಲದು. ಆದುದರಿಂದ ಇದರ ಬಗ್ಗೆ ಏನು ಕ್ರಮ ತೆಗೆದು ಕೊಂಡಿದ್ದೀರಿ, ಅದನ್ನು ವಿವರವಾಗಿ ಹೇಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ವಿಚಿತ್ರವಿಸಸ್ ಎಂದು ಯಾರನ್ನು ಮುಂದೆ ಇಟ್ಟಿದ್ದಾರೋ ಅವರು ಈ ಹೊಡೆದಾಟ ಆಗಲಿಲ್ಲ ಎಂದು ಹೇಳಿದ ಮೇಲೆ ನಾವು ಮಾಡುವುದು ಏನು ?

ಶ್ರೀ ಕಾಗೋಡು ತಿಮ್ಮಪ್ಪ.—ಮುಖ್ಯವಾಗಿ ಹಾಸ್ಟೆಲ್‌ನಲ್ಲಿರತಕ್ಕ ವಾರ್ಡನ್‌ರವರು ಅಲ್ಲಿರತಕ್ಕ ವಿದ್ಯಾರ್ಥಿಗಳನ್ನು ನರಿಯಾಗಿ ಹತೋಟಿಯಲ್ಲಿ ಇಡುವುದಕ್ಕೆ ಸಾಧ್ಯವಿಲ್ಲದೇ ಹೋದ ಮೇಲೆ ಅವರನ್ನು ಏಕೆ ಅಲ್ಲಿ ಇಟ್ಟಿದ್ದೀರಿ ? ಏಕೆಂದರೆ ಮಾನ್ಯ ಸಿದ್ದವೀರಪ್ಪನವರು ಇದ್ದಾರೆ, ಹೋದ ಸಾರಿ ವಾರ್ಡನ್ ಭಾರಿ ತಪ್ಪುಮಾಡಿದ್ದಾರೆ ಎಂದು ಭೀಮಪ್ಪ ಎಂಬುವರನ್ನು ತೆಗೆದು ಇವರನ್ನು ನೇಮಕ ಮಾಡಿದ್ದೀರಿ.

ಉಮೇಶ್‌ಬಾಬು ಎನ್ನತಕ್ಕಂಥ ವಿದ್ಯಾರ್ಥಿಗೆ ಹಾಸ್ಟರ್ ರೂಮಿನಲ್ಲಿ ಸ್ಪೆಷಲ್ ಆಗಿ ಫೋನ್ ಹಾಕಿಸತಕ್ಕಂಥ ಉದ್ದೇಶವೇನಿದೆ ? ಅದೇ ಪ್ರಿವಿಲೇಜನ್ನು ಎಲ್ಲಾ ವಿದ್ಯಾರ್ಥಿಗಳಿಗೂ ಎಲ್ಲಾ ಹಾಸ್ಟಲ್‌ನಲ್ಲಿರತಕ್ಕಂಥವರಿಗೂ ಮಾಡಿಕೊಡುತ್ತೀರಾ ? ಹಾಗಿಲ್ಲದಿದ್ದರೆ ಆ ರೀತಿ ಫೋನ್ ಹಾಕಿಸಿ ಕೊಳ್ಳಲು ವಾರ್ಡನ್ ಅನುಮತಿ ಕೊಟ್ಟಿದ್ದಾರೆಯೇ ? ಅಥವಾ ಹಾಸ್ಟರ ನಲ್ಲಿ ಮೆಡಿಕಲ್ ಕಾಲೇಜ್ ಸ್ಟೂಡೆಂಟ್ಸ್ ಹಾಕಿಸಿಕೊಳ್ಳಬಹುದೆಂದು ನಿರ್ಣಯ ಕೊಟ್ಟಿದ್ದಾರೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲ್ಲಿ ಪ್ರಶ್ನೆ ಇರತಕ್ಕಂಥದ್ದು ಹೊಡೆದಾಟದ ಪ್ರಶ್ನೆ. ವಾರ್ಡನ್‌ರವರು ಇವಕ್ಕೆ ಏನೂ ಜವಾಬ್ದಾರರಲ್ಲ. ಯಾರು ಫೀಜನ್ನು ಕೊಟ್ಟಿಲ್ಲ ಅವರಿಗೆ ಊಟಕ್ಕೆ ಹಾಕಬೇಡಿ ಎಂದು ವಾರ್ಡನ್ ಹೇಳಿರುವುದು ತಪ್ಪು ಎನ್ನುವುದಾದರೆ ಅದು ಬೇರೆ ವಿಷಯ. ಜನರಲ್ ಸೆಕ್ರೆಟರಿ ಉಮೇಶ್ ಬಾಬುಗೂ ಚಾಕಯ್ಯನಿಗೂ ಹೀಗೆ ಹೊಡೆದಾಟ ಬಡಿದಾಟವಾಯಿತು ಎನ್ನತಕ್ಕಂಥ ಪ್ರಶ್ನೆ ಇಲ್ಲಿ ಬಂದಿರತಕ್ಕಂಥದ್ದು. ಯಾರು ಮುಂದೆ ಚಾಕಯ್ಯನಿಗೂ ಉಮೇಶ್ ಬಾಬುಗೂ ಹೊಡೆದಾಟ ಬಡಿದಾಟವಾಯಿತೆಂದು ಹೇಳಿದ್ದರೋ ಅವರೇ ಹೊಡೆದಾಟ ನಡೆಯಲಿಲ್ಲ ವೆನ್ನುವಾಗ ನಾವು ಏನು ಮಾಡತಕ್ಕಂಥದ್ದು ಇದೆ ?

(*ii*) *re*: Murder of a harijan youth in Kodihalli Village in Hoskote Taluk.

Sri KAGODU THIMMAPPA (Sagar).—I call the attention of the Chief Minister to the murder of a Harijan youth in Kodihalli village of Hoskote Taluk in January, 1975.

Sri H. M. CHANNABASAPPA.—I beg to make the following statement on behalf of the Chief Minister :

It is reported that on 14th January 1975 at about 16-15 hours Sri T. Sonnappa, Village Panchayat Chairman of Kodihalli Village appeared at Kadugodi Police Station and presented a written report to the effect that on 14th January 1975 at 15-00 hours, one Harijan Yellappa and 9 others non-harijans assaulted Patel P. Basave Gowda and Harijan Hutchappa with clubs, axes and spears and caused bleeding injuries to them at Kodihalli Village.

The Police Sub-Inspector, Kadugodi registered a case in Crime No. 13/75 u/s 143, 147, 148, 149 and 324 IPC and took up investigation of the case. Immediately, he visited the village and shifted the injured Basave Gowda and Harijan Hutchappa to Hoskote Hospital and then to Victoria Hospital, Bangalore, where both were admitted as inpatients.

On the same day *i. e.* 14th January 1975 at about 18-30 hours, one Basappa of Kodihalli appeared before the Police Sub-Inspector and complained that he was assaulted by Harijan Hutchappa (the injured in Cr. No. 13/75) at about 1 p.m. in Kodihalli Village and caused head injury to him. The Police Sub-Inspector registered the complaint of Basappa in Cr. No. 14/75 u/s 324 IPC and continued investigation of both the cases.

On 18th January 1975 at about 5-15 A.M. the injured Harijan Hutchappa expired in Bangalore Mental Hospital. Hence the section of Law in Cr. No. 13/75 was altered to 302 I.P.C.

Investigation revealed that the following 10 persons were involved in this case :—

1 Byyappa s/o Doddakentchappa of Kodihalli.
2 Sampangiramaiah s/o Byyappa of Kodihalli.
3 T. Channabasappa s/o Muniyappa of Kodihalli.
4 Aswathappa s/o T. Channabasappa of Kodihalli.
5 Doddamuniyappa s/o Doddakentchappa of Kodihalli.
6 Jayaraiah s/o Doddamuniyappa of Kodihalli.
7 Chikkamuniyappa s/o T. Nanjundappa of Kodihalli.
8 Channabasappa s/o T. Nanjundappa of Kodihalli.
9 Appanna s/o T. Nanjundappa of Kodihalli.
10 K. Yellappa s/o Kentchappa of Kodihalli.

Of these, seven accused persons *viz*-A1, A2, A3, A5, A7, A9 and A10 were arrested on 17th January 1975. The remaining three are absconding. Earnest efforts are being made to arrest them also. Investigation of the case is almost complete. The case will be charge-sheeted shortly.

The case has nothing to do with any differences between the caste Hindus and Harijans In the rioting, Harijans took part on both sides. In Cr. No. 13/75, A-10-K. Yellappa is a Harijan who is an active member of Congress(R) Party while deceased Hutchappa was a very active member of Congress (O) Party.

As a measure of precaution H.Cs and P.Cs. are regularly posted to this village to watch the movements of all the concerned and take prompt action. The P.S.I. Kadugodi has been instructed to visit the village every day, study the developments and take prompt action. The C.I., Hosakote, has also been instructed to visit this village as often as possible, study the local situation, hear the complaints of Harijans if any and give proper relief. The Superintendent of Police Bangalore District visited Kodihalli on 19th January 1975. Social discrimination is not being practised in this village and Harijans are not being harassed also.

There has been no trouble in the village after 14th January 1975. No complaints have been received from any Harijan regarding his personal safety or danger to his property.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ ಪೊಡಲು ಕ್ರೈಮ್ ನಂಬರ್ 13ರಲ್ಲಿ, ಸೆಕ್ಷನ್ 1 3, 147, 148, 149 ಮತ್ತು 324 ಐ.ಪಿ.ಸಿ. ಪ್ರಕಾರ ಕೇಸ್ ರಿಜಿಸ್ಟರ್ ಮಾಡಿದ್ದೀರಿ. ಆ ವ್ಯಕ್ತಿಗೆ ಘಾಯವಾಗಿತ್ತು, ಅವನು ಸತ್ತ ಮೇಲೆ ಅನಂತರ ಕ್ರೈಮ್ ನಂಬರ್ 302ರ ಪ್ರಕಾರ ಈ ಕೇಸನ್ನು ಬದಲಾವಣೆ ಮಾಡಿ ರಿಜಿಸ್ಟರ್ ಮಾಡಿದ್ದೀರಿ. ಅಪರಾಧಿಗಳನ್ನು ಯಾವತ್ತು ದಸ್ತಗಿರಿ ಮಾಡಿದಿರಿ? 10 ಜನರಲ್ಲಿ 3 ಜನ ಸಿಕ್ಕಿಲ್ಲವೆಂದು ಹೇಳಿದ್ದೀರಿ. ಬಾಕಿ 7 ಜನರನ್ನು ಯಾವಾಗ ದಸ್ತಗಿರಿ ಮಾಡಿದಿರಿ? ಅವರನ್ನು ಜ್ಯುಡಿಷಿಯಲ್ ಕಸ್ಟಡಿಯಲ್ಲಿ ಇಟ್ಟಿದ್ದಿರೋ ಆಥವಾ ಹಾಗೆಯೇ ಏನಾದರೂ ಬಿಟ್ಟಿದ್ದಿರೋ?

Sri H. M. CHANNABASAPPA.—Well, that information whether they have been let out on bail or whether they have been in custody is not with me.

ಶ್ರೀ ಎಚ್. ಡಿ. ದೇವೇಗೌಡ.—ಇಲ್ಲಿ ಪ್ರಾಮುಖ್ಯವಾದ ಪ್ರಶ್ನೆ ಏನೆಂದರೆ, ಕೇಸನ್ನು ಐ.ಪಿ.ಸಿ. 302ರ ಪ್ರಕಾರ ರಿಜಿಸ್ಟರ್ ಮಾಡಿ ಆ ಪಾರ್ಟಿಗಳನ್ನು ಮನೆಯಲ್ಲಿಯೇ ಕೂತುಕೊಳ್ಳುವಂತೆ ಬಿಟ್ಟುಬಿಟ್ಟಿದ್ದೀರಿ. ಇವರ ಬಗ್ಗೆ ವ್ಯವಹಾರ ನಡೆಯುವಾಗ ಹೇಗೆ ಬಿಟ್ಟಿರಿ?

Sri H. M. CHANNABASAPPA.—We will give the information. There is no question of evading giving you the answer. It is not straightaway available with me. I will be giving you. There is no intention of keeping it away from the hon. Members. It looks as if the hon. Members feel that I have something to hide. There is nothing to hide. The accused were arrested on 17th January 1975 and they were let on bail and the court is moved to cancel the bail.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ ತಮಗೆ ಗೊತ್ತಿದೆ, ಯಾರು 302ನೇ ಸೆಕ್ಷನ್ ಕೆಳಗೆ ಬಂದಿಯಾಗಿರುತ್ತಾರೋ ಅವರು ಮರಣ ದಂಡನೆಗೆ ಯೋಗ್ಯರಾಗಿರತಕ್ಕಂಥ ವ್ಯಕ್ತಿಗಳು ಎಂಬುದು. ಆ ರೀತಿ 302ನೇ ಸೆಕ್ಷನ್ ಕೆಳಗೆ ಯಾರು ಅಪಾದನೆಗಳಿಗೆ ಒಳಗಾಗಿರುತ್ತಾರೆ ಅವರನ್ನು ಬಂಧಿಖಾನೆಯೊಳಗೆ ಹಾಕಿ ವಿಚಾರಣೆ ಮಾಡತಕ್ಕಂಥದ್ದು ಪೋಲೀಸರ ಕರ್ತವ್ಯ. ಕೇಸ್ ಮುಕ್ತಾಯ ಹಂತಕ್ಕೆ ಬಂದಕೂಡಲೇ ಅವರನ್ನು ದಸ್ತಗಿರಿ ಮಾಡಿ ಹಾಗೆಯೇ ಬಿಟ್ಟಿರುವುದಕ್ಕೆ ಮೂಲ ಕಾರಣವೇನು?

Sri H. M. CHANNABASAPPA.—They were arrested on charge of murder on 18th January 1975. The accused were arrested on 17th January 1975 and let on bail by order of court. Now, the Police have moved the court to cancel the bail.

ಶ್ರೀ ಎಚ್. ಡಿ. ದೇವೇಗೌಡ.—ಇಲ್ಲಿ ಇರತಕ್ಕ ಪ್ರಮುಖ ಪ್ರಶ್ನೆ ಎಂದರೆ 17ನೇ ತಾರೀಖು 7 ಜನ ಆಪರಾಧಿಗಳನ್ನು ಕೋರ್ಟ್ ಬೇಲ್ ಮೂಲಕ ಬಿಟ್ಟಿದ್ದಾರೆ. ಆ ದಿನ ಯಾರು ಸರ್ ಇನ್ಸ್ಪೆಕ್ಟರ್ ತನಿಖೆ ಕೆಲಸವನ್ನು ಮಾಡಿದ್ದಾರೆ, ಅವನು ಆತನ ಕರ್ತವ್ಯವನ್ನು ಸರಿಯಾದ ರೀತಿಯಲ್ಲಿ ಮಾಡಿಲ್ಲ ಎಂದು ಕೋರ್ಟ್ ಬೇಲ್ ಆರ್ಡರ್ ಕೊಡುವಾಗ ಹೇಳಿದ್ದಾರೆ. ಐ. ಪಿ. ಸಿ. 326ರ ಕಲಂ ಪ್ರಕಾರ ಕೇಸ್ ರಿಜಿಸ್ಟರ್ ಮಾಡಬೇಕಾಗಿತ್ತು, ಆದರೆ ಐ. ಪಿ. ಸಿ. ಸೆಕ್ಷನ್ 324ರ ಪ್ರಕಾರ ಕೇಸ್ ರಿಜಿಸ್ಟರ್ ಮಾಡಿರುವುದರಿಂದ ಆತನು ತನ್ನ ಕರ್ತವ್ಯದಲ್ಲಿ ಲೋಪ ಮಾಡಿದ್ದಾನೆ. ಅದನ್ನು ತಮ್ಮ ಕಡೆಗೆ ಕಳುಹಿಸಿ ಕೊಡುತ್ತೇನೆ. ಡಾಕ್ಟರ್ ಸರ್ಟಿಫಿಕೇಟ್ ಅವನ ಕೈಗೆ ಬಂದಿರುವುದರಿಂದ ಆ ಒಂದು ಆಧಾರದ ಮೇಲೆ 326ರ ಕಲಂ ಪ್ರಕಾರ ಕೇಸ್ ರಿಜಿಸ್ಟರ್ ಮಾಡಬೇಕಾಗಿತ್ತು. ಆದರೆ 324ರ ಪ್ರಕಾರ ರಿಜಿಸ್ಟರ್ ಮಾಡಿರುವುದರಿಂದ ಕೋರ್ಟಿಗೆ ಬೇರೆ ಗತ್ಯಂತರವಿಲ್ಲವೆಂದು ಹೇಳಿದ್ದಾರೆ.

Sri H. M. CHANNABASAPPA.—What is the relevance?

ಶ್ರೀ ಎಚ್. ಡಿ. ದೇವೇಗೌಡ.—(ಕೋಪದಿಂದ) ರಿಲೆವೆನ್ಸ್ ರಿಲೆವೆನ್ಸ್! ಮಿನಿಸ್ಟರ್ ಕಾನ್ಸ್ಟಿಟ್ಯೂಯನ್ಸಿಯಲ್ಲಿ ಮರ್ಡರ್ ಆದರೆ ಈ ರೀತಿ ಮಾಡಬೇಕಾಗಿತ್ತು ಎಂದು ಹೇಳಿದ್ದು ರಿಲೆವೆಂಟ್ ಅಲ್ಲವೇ?

Sri H. M. CHANNABASAPPA.—The Court might have ordered. What is the relevance?

Sri H. D. DEVE GOWDA.—The relevance is.....

Sri S. M. KRISHNA —There is a way to get the answers from the Government. We might have the worst kind of difference but.....

Sri H. D. DEVE GOWDA.—Before influencial people, there is no justice. You can declare that.

Sri H. M. CHANNABASAPPA.—I rise on a point of order.

Sri H. D. DEVE GOWDA.—It is relevant ? I am quoting from the order of the Court. Strictures passed by the Court according to the Hon. Minister is not relevant.

Sri S. M. KRISHNA.— If Strictures are passed by the Court, the Government will certainly punish those officers. There is are no two opinions about it.

Sri H. M. CHANNABASAPPA.—I rise on a point of order.

ಅಧ್ಯಕ್ಷರು.— ರಿಲೆವೆನ್ಸ್ ಎಂದು ಹೇಳಿದ್ದಕ್ಕೆ ತಮಗೆ ಕೋಪ ಬಂದರೆ .....

ಶ್ರೀ ಎಚ್. ಡಿ. ದೇವೇಗೌಡ.—ಆರ್ಡರ್ ನನ್ನ ಹತ್ತಿರ ಇದೆ.

ಅಧ್ಯಕ್ಷರು.—ಇಲ್ಲಿ ಕೋಪಬಂದರೆ ನಡೆಯುವುದಿಲ್ಲ, ಕೋಪ ಮಾಡಿಕೊಳ್ಳುವ ಸ್ಥಳಗಳು ಬೇರೆ ಇವೆ.

ಶ್ರೀ ಎಚ್. ಡಿ. ದೇವೇಗೌಡ.—ಸರ್ಕಾರದವರು ಹೇಗೆ ಉಡಾಫೆ ಉತ್ತರ ಹೇಳಿಕೊಂಡೇ ಇರಲಿ.

ಅಧ್ಯಕ್ಷರು.—ವಿರೋಧ ಪಕ್ಷದ ನಾಯಕರಾಗಿ ಹೀಗೆ ಸಮಾಧಾನ ಕಳೆದುಕೊಂಡರೆ ಕಷ್ಟ.

ಶ್ರೀ ಎಚ್. ಡಿ. ದೇವೇಗೌಡ.—ಇದರ ಬಗ್ಗೆ ಯಾವ ಉಪನ್ಯಾಸವೂ ಬೇಡ. ಮಂತ್ರಿಗಳ ಕ್ಷೇತ್ರದಲ್ಲಿ ಮರ್ಡರ್ಸ್ ಆದರೆ ವಿಚಾರಣೆಗಳು ಆಗಬೇಕಾಗಿಲ್ಲ ಎಂದು ರಿಕ್ಲೇರ್ ಮಾಡಲಿ.

Sri H. M. CHANNABASAPPA.—Murders take place, violence takes place in various constituencies. If a murder or violence take place in Holenarsipur, am I to link the hon. Member with it ? What is the meaning of it ? I cannot understand the relevance of it.

Sri H. D. DEVE GOWDA.—If I am responsible, I will accept it.

Sri H. M. CHANNABASAPPA. —I am telling this with all humility It is not fair on the part of the opposition leader merely because in Anekal Taluk or in some other taluk the murder takes place to link either the Assembly Member or the Minister is very unfair to say the least.

ಶ್ರೀ ಕೋಣಂದೂರು ಲಿಂಗಪ್ಪ.—ಅವರು ಲಿಂಕ್ ಮಾಡಬೇಕೆಂದು ಹೇಳಲಿಲ್ಲ. He must take it back.

ಶ್ರೀ ಕಾಗೋಡು ತಿಮ್ಮಪ್ಪ.—ಮಿನಿಸ್ಟರ್‌ರವರಿಗೆ ಲಿಂಕ್ ಮಾಡಬೇಕೆಂದು ದೇವೇಗೌಡರು ಹೇಳಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಮಿನಿಸ್ಟರ್ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಮರ್ಡರ್ ಆದರೆ ನಾವು ಹೇಳುವುದು ಹೇಗೆ ಇರ್ರಿಲೆವೆಂಟ್ ಆಗುತ್ತದೆ ?

ಶ್ರೀ ಎಸ್. ಎಂ. ಕೃಷ್ಣ.—ಮರ್ಡರ್‌ಗಳು ಬೇಕಾದಷ್ಟು ಆಗುತ್ತವೆ, ಮಿನಿಸ್ಟರ್ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಆದರೆ ಮಿನಿಸ್ಟರ್ ರೆಸ್ಪಾನ್ಸಿಬರ್ ಎಂದು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎನ್. ಚಿಕ್ಕೇಗೌಡ.—ಸ್ವಾಮಿ, ನನ್ನ ಮೇಲೆ ಅಪಾದನೆ ಮಾಡಿದರೆ, ನಾನು ನಮ ಜಾಯಿಷಿ ಕೊಡುತ್ತೇನೆ. ದೇವೇಗೌಡರ ಕಾನ್ಸ್ಟಿಟ್ಯೂಯನ್ಸಿಯಲ್ಲಿ ಮರ್ಡರ್ ಆಗಿ ಯಾರಾದರೂ ಸತ್ತರೆ ದೇವೇಗೌಡರೇ ಅದಕ್ಕೆ ರೆಸ್ಪಾನ್ಸಿಬರ್ ಎಂದು ಅವರ ಮೇಲೇ ಹೇಳಬಹುದೇ ? ಕಾಗೋಡು ತಿಮ್ಮಪ್ಪನವರು ಕಾನ್ಸ್ಟಿಟ್ಯೂಯನ್ಸಿಯಲ್ಲಿ ಮರ್ಡರ್ ಆಗಿ ಸತ್ತರೆ ಕಾಗೋಡು ತಿಮ್ಮಪ್ಪನವರು ರೆಸ್ಪಾನ್ಸಿಬರ್ ಎಂದು ಹೇಳುವುದಕ್ಕೆ ನಾಚಿಕೆಯಾಗುವುದಿಲ್ಲವೆ ?

ಅಧ್ಯಕ್ಷರು.—ಅವರು ಬಹಳ ಜನರಲೈಸ್ ಮಾಡಿ ಸ್ಟೇಟ್‌ಮೆಂಟ್ ಮಾಡಿದರು. ಮಿನಿಸ್ಟರ್ ಕ್ಷೇತ್ರದಲ್ಲಿ ಮರ್ಡರ್ ಆಯಿತು ಎಂದರೆ ಅದರು ಇನ್‌ಫ್ಲೂಯನ್ಸ್ ಮಾಡಬಹುದು ಎಂದು ಹೇಳಿದರು. ಅವರು ಎನು ಕೇಳಿದರು ಅಂದರೆ ಮಾನ್ಯ ಸದಸ್ಯರ ಕ್ಷೇತ್ರದಲ್ಲೇ ಏನಾದರೂ ಹೀಗೆ ಆದರೆ ಆಗ ತಮ್ಮನ್ನೂ ರೆಸ್ಪಾನ್ಸಿಬರ್ ಮಾಡಬಹುದೇ ಎಂದು.

ಶ್ರೀ ಎಚ್. ಡಿ. ದೇವೇಗೌಡ.—ಹಾಗೆ ಮಾಡಬಹುದು.

ಅಧ್ಯಕ್ಷರು.—ಹಾಗೆ ಜನರಲೈಸ್ ಮಾಡಿದ್ದು ಸರಿಯಿಲ್ಲ.

ಶ್ರೀ ಎಸ್. ಬಂಗಾರಪ್ಪ.—ದೇವೇಗೌಡರು ಮಂತ್ರಿಗಳಾಗಿಲ್ಲ, ಅವರಿಗೆ ಇದು ಸಂಬಂಧ ಬರುವುದಿಲ್ಲ.

MADAM SPEAKER.—This is not at all proper.

ಶ್ರೀ ಎನ್. ಚಿಕ್ಕೇಗೌಡ.—ಶ್ರೀಮಾನ್ ದೇವೇಗೌಡರವರಿಗೆ ಇದೇ ಸಂದರ್ಭದಲ್ಲಿ ಒಂದು ಮಾತು ಸ್ಪಷ್ಟಪಡಿಸಬಯಸುತ್ತೇನೆ. ಮಾನ್ಯ ದೇವೇಗೌಡರು ದಿನಾಂಕ 17ನೇ ಫೆಬ್ರವರಿ 1975 ರಂದು ರಾಜ್ಯಪಾಲರ ಭಾಷಣದ ಸಂಬಂಧದಲ್ಲಿ ಮಾತನಾಡಿದ ಮಾತು ಈ ರೀತಿ ಇದೆ :—

> ''ನಮ್ಮ ರಾಜ್ಯದ ಸಚಿವ ಸಂಪುಟದಲ್ಲಿರತಕ್ಕ ಒಬ್ಬರು ಸಹೋದ್ಯೋಗಿಗಳು ಹೇಳತಕ್ಕಂಥ ಮಾತು ಏನೆಂದರೆ ಕ್ಯಾನ್ವಸ್ ಹಿಂದೂಸ್ ಸಪೋರ್ಟ್ ಮಾಡುವ ಹರಿಜನ ಸತ್ತರೆ ಮಹಾ ಚಿಂತೆಯೇನೂ ಇಲ್ಲವೆಂದು ಹೇಳಿದರು. ಅದೂ ಅಲ್ಲದೆ ಕ್ಯಾನ್ವಸ್ ಹಿಂದೂಸ್ ಸಪೋರ್ಟ್ ಮಾಡುವ ಹರಿಜನ ಸತ್ತರೆ, ಅವನು ಸತ್ತದ್ದನ್ನು ನನ್ನ ಹತ್ತಿರ ಹೇಳಲಕ್ಕೆ ಏತಕ್ಕೆ ಬಂದಿರಿ ಎಂದು ಕೇಳಿದರು. ನಾನು ಕೇಳುತ್ತೇನೆ; ಈ ಅಡಳಿತ ಕಾಂಗ್ರೆಸ್‌ಗೆ ಬೆಂಬಲ ಕೊಡುವುದಕ್ಕೆ ಸರ್ಕಾರದವರು ಇದ್ದಾರೆಯೇ ? ಅಥವಾ ಯಾವುದೇ ರಾಜಕೀಯ ಪಕ್ಷಕ್ಕೆ ಸಹಾಯ ಮಾಡತಕ್ಕೆ ಹರಿಜನರಿಗೆ ತಮ್ಮ ಸರ್ಕಾರದ ಕಾನೂನಿನ ಚೌಕಟ್ಟಿನೆಲ್ಲಿ ರಕ್ಷಣೆ ಕೊಡುವುದಿಲ್ಲ ಎಂಬ ಉದ್ಧಟತನ ಇವ್ಯರೆ ನೀವು ಆ ಜಾಗದಲ್ಲಿ ಕೂತುಕೊಳ್ಳುವುದಕ್ಕೆ ರಾಯಕ್ಕು ಇಲ್ಲ. I am spelling out definite charge. I am not going to make any bald Statement ಇವತ್ತು ನಾನು ಕೇಳುತ್ತೇನೆ, ಅಡಳಿತ ಕಾಂಗ್ರೆಸ್‌ಗೆ ಸಹಾಯ ಮಾಡತಕ್ಕ ಹರಿಜನರಿಗೆ ಮಾತ್ರ ಕಾನೂನು, ಕಲಮ್ಮಿನಲ್ಲಿ ಸೌಲಭ್ಯವನ್ನು ಕೊಡುವುದಕ್ಕೆ ಸಾಧ್ಯ ಇದ್ದರೆ ಬೇರೆ ಪಕ್ಷಗಳಿಗೆ ಸಹಾಯ ಮಾಡತಕ್ಕ ಹರಿಜನ ಗಿರಿಜನ, ಹಿಂದುಳಿದ ವರ್ಗದವರಿಗೆ ಸಹಾಯ ಮಾಡಲಕ್ಕೆ ತಯಾರು ಇಲ್ಲವೆ ಎಂದು ಕೇಳುತ್ತೇನೆ''.

ಇಷ್ಟು ಮಾತನ್ನು ಮೊನ್ನೆ ದಿವಸ ಅಂದರೆ 17ನೇ ಫೆಬ್ರವರಿ 1975ರಂದು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡತಕ್ಕ ಕಾಲದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಹೊಸಕೋಟೆ ಕ್ಷೇತ್ರ ಎಂದು ಹೇಳಿದರೆ ಯಾರು ? ಕಾಗೋಡು ಎಂದು ಹೇಳಿದರೆ ಮತ್ತೆ ಯಾರು ? ಆ ಕ್ಷೇತ್ರವನ್ನು ಪ್ರತಿನಿಧಿನತಕ್ಕವರು ಯಾರು ? ಅಪಾದನೆ ಮಾಡತಕ್ಕ ಅಧಿಕಾರ ಇದೆ ಎಂದು ಆ ರೀತಿ ಅಪಾದನೆ ಮಾಡಿದರೆ ಹೇಗೆ ? ಕಾನೂನು ಚೌಕಟ್ಟಿನೊಳಗೆ ಇದು ಕೊರ್ಟ್‌ಗೆ ಹೋಗಿದೆಯೆಂದು ನಿನ್ನೆ ದಿವಸ ಚಾರ್ಜ್‌ಷೀಟ್ ಹಾಕಿದ್ದಾರೆ ಎಂದು ನನಗೆ ತಿಳಿದು ಬಂದಿದೆ. ಮಾನ್ಯ ದೇವೇಗೌಡರ ಕ್ಷೇತ್ರದಲ್ಲಿ ಆಥವಾ ಯಾವ ಮಾನ್ಯ ಸದಸ್ಯರ ಕ್ಷೇತ್ರದಲ್ಲೇ ಆಗಲಿ ಮರ್ಡರ್ ಆಗುತ್ತದೆ, ದರೋಡೆ ಆಗುತ್ತದೆ, ಲೂಟಿಯಾಗುತ್ತದೆ, ಕಳ್ಳತನವಾಗುತ್ತದೆ ಎಂದರೆ ಅದಕ್ಕೆಲ್ಲಾ ಮಂತ್ರಿಗಳೇ ಜವಾಬ್ದಾರರಾದೆ ಅಥವಾ ಶಾಸಕರೇ ಜವಾಬ್ದಾರರು ಎಂದು ಮಾನ್ಯ ದೇವೇಗೌಡರು ಹೇಳಿರತಕ್ಕದ್ದನ್ನು ಓದಿದ್ದೇನೆ.

Sri H. D. DEVE GOWDA.—I am going to stand by that statement.

Sri N. CHIKKE GOWDA.—I am also going to stand by it. That is why I am placing it. ನಾನು ಮಾಡಿದ್ದು ಎಂದು ಸಾಬೀತು ಮಾಡಿದರೆ ನನ್ನ ಮಂತ್ರಿತನಕ್ಕೆ ಮತ್ತು ಸದಸ್ಯತ್ವಕ್ಕೆ ಎರಡಕ್ಕೂ ರಾಜಿನಾಮೆ ಕೊಡುತ್ತೇನೆಂದು ಘಂಟಾಘೋಷವಾಗಿ

ಹೇಳುತ್ತೇನೆ. ಈ ರೀತಿ ಅಪಾದನೆ ಮಾಡಿರುವುದು ಪತ್ರಿಕೆಯಲ್ಲಿ ವರದಿಯಾಗಿದೆ. ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ತಯಾರಾಗಿಲ್ಲ. ಪಕ್ಷದ ದೃಷ್ಟಿಯಿಂದ ಈ ಸದನದಲ್ಲಿ ಏನು ಬೇಕಾದರೂ ಹೇಳಬಹುದೆಂದು ಹೇಳಿ ತಾವು ಹೋದರೆ ಆಯಿತೆ? ನಾವೂ ಮಾನವಂತರು, ನಮಗೂ ಆತ್ಮ ಗೌರವ ಇದೆ, ಅವರು ಈ ರೀತಿ ಅಪಾದನೆ ಮಾಡುವುದನ್ನು ಮೊಟಕುಗೊಳಿಸಬೇಕು. ಈ ರೀತಿ ಅಪಾದನೆ ಮಾಡಿ ಜನರನ್ನು ಮೆಚ್ಚಿಸುವುದಕ್ಕಾಗುವುದಿಲ್ಲ. ನಮ್ಮ ಮೇಲೆ ನಮ್ಮ ಕ್ಷೇತ್ರದ ಜನತೆಗೆ ವಿಶ್ವಾಸವಿದೆ. ಅಲ್ಲಿ ಜನತೆಯ ಸಹಕಾರ ಪಡೆದಿದ್ದೇವೆ. ಈ ರೀತಿ ಅಪಾದನೆ ಮಾಡುವುದಕ್ಕೂ ಒಂದು ಮಿತಿ ಇರಬೇಕು. ಈ ರೀತಿ ಅಪಾದನೆಮಾಡಿ ಬ್ಲಾಕ್‌ಮೇಲ್ ಮಾಡುವುದಕ್ಕೆ ಹೊರಟರೆ ನಾವು ಮಂತ್ರಿಗಳಾಗಿ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ತಯಾರಾಗಿಲ್ಲ.

2-30 P.M.

ಶ್ರೀ ಎಚ್. ಡಿ. ದೇವೇಗೌಡ.—ಸರ್ಕಾರದಿಂದ ಉತ್ತರ ಕೊಡಬೇಕು. ಇದಕ್ಕೆ ಸಂಬಂಧ ಪಟ್ಟ ಮಂತ್ರಿಗಳು ಫ್ರೀಸ್ ಇನ್‌ವೆಸ್ಟಿಗೇಷನ್ ಮುಗಿದಿದೆ, ಚಾರ್ಜ್‌ಶೀಟ್ ಕೊಡುವುದರಲ್ಲಿದ್ದಾರೆಂದು ಹೇಳುತ್ತಾರೆ. ನಿನ್ನೆ ದಿವಸ ಚಾರ್ಜ್‌ಶೀಟ್ ಹಾಕಿದ್ದಾರೆಂದು ಮಂತ್ರಿಗಳು ಹೇಳುತ್ತಾರೆ. ಇದರಲ್ಲಿ ಯಾರದು ತಪ್ಪು ಸುತ್ತಮುತ್ತ ಎಂಬುದು ನನಗೆ ಗೊತ್ತಾಗುವುದಿಲ್ಲ ಅವರು ಇದರ ಬಗ್ಗೆ ಈ ಹಂತದಲ್ಲಿ ಪೂರ್ತಿ ವಿಷಯಗಳನ್ನು ಸಂಗ್ರಹ ಮಾಡಿದ್ದಾರೆಯೇ?

ಅಧ್ಯಕ್ಷರು.—ಈಗ ಏನಾಗಿದೆ ಎಂದರೆ ಈ ಕಡೆ 10 ಜನ ಎದ್ದು ನಿಂತುಕೊಂಡು ಒಟ್ಟಿಗೆ ಗಲಾಟೆ ಮಾಡಿದರೆ, ಹಾಗೆಯೇ ಈ ಕಡೆಯೂ ಆಸ್ಟ್ರೇ ಜನ ಒಟ್ಟಿಗೆ ನಿಂತು ಗಲಾಟೆ ಮಾಡಿದರೆ ನಾನು ಸಭೆಯನ್ನು ಅಡ್ಜರ್ನ್ ಮಾಡಿ ಹೋಗಬೇಕಾಗುತ್ತದೆ. ಹೀಗೆ ಎಲ್ಲರೂ ಕೂಗಾಡುತ್ತಿದ್ದರೆ ಸಭೆಯ ಕಾರ್ಯಕಲಾಪಗಳು ನಡೆಯುವುದಿಲ್ಲ. ಹೀಗೆ ಒಂದಾಗಿ ನಾನು ಮಾತನಾಡುತ್ತಿದ್ದೇನೆಂದು ಭಾವಿಸಬೇಡಿ. ತಾವು ಕೇಳಲಿಕ್ಕೆ ಇರುವುದು ಅವರು ಹೇಳಲಿಕ್ಕೆ ಇರುವುದು ತಾವು ಕೇಳದೆ ಅವರು ಸುಳ್ಳು ತ್ತಿವರು. ನಾನು ನಿಂತಿರುವುದು ಕಾಣುವುದಿಲ್ಲವೆ? ಸಭೆಯನ್ನು ಅಡ್‌ಜರ್ನ್ ಮಾಡಿ ಹೋಗುವರೆಗೂ ಎಂತೆ ಇರಬೇಕು. ಸಭೆಯ ನಡವಳಿಯ ಬಗ್ಗೆ ಕೆಲವು ರೀತಿ ನೀತಿಗಳಿವೆ. ರೂಲ್ಸ್‌ಗಳಿವೆ. ಅದರಂತೆ ನಡೆಯಬೇಕು. ನುಮ್ಮನೆ ಕೂಗಾಡುವುದರಲ್ಲಿ ಅರ್ಥವಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ. ನಾನು ಪ್ರತಿಯೊಂದು ಅಕ್ಷರವನ್ನೂ ಎಲ್ಲರವಾಗಿ ಗಮನಿಸಿದ್ದೇನೆ. ಶ್ರೀಮಾನ್ ಚಿಕ್ಕೇಗೌಡರು ಒಂದು ಗುರುತರವಾದ ಅಪಾದನೆ ಮಾಡಿದ್ದಾರೆ. ವಿರೋಧ ಪಕ್ಷದ ನಾಯಕರು ಹೇಳುವಾಗ ಬೇಜವಾಬ್ದಾರಿಯುತವಾದ ಅಪಾದನೆಗಳನ್ನು ಮಾಡುತ್ತಾ ಇದ್ದಾರೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

Sri H. M. CHANNABASAPPA.—I raise on a point of order. Madam Speaker, Rule 63 lays down the procedure for a Calling attention question. It reads like this :

> "A Member may with the previous permission of the Speaker, call the attention of Minister to any matter of urgent public importance and the Minister may make a brief statement or ask for time to make a statement at a later hour or date"
>
> (2) There shall be no debate on such statement at the time it is made.

Sri H. D. DEVE GOWDA.—It applies to you also.

Sri H. M. CHANNABASAPPA.—I am not making any debate : It is you friends who are making debate.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಒಬ್ಬರು ಮಂತ್ರಿಗಳು ಉತ್ತರ ಕೊಡುತ್ತಿರುವಾಗ ಇನ್ನೊಬ್ಬ ಮಂತ್ರಿಗಳು ಮಾತನಾಡಿದರು.

Sri H. M. CHANNABASAPPA.—Therefore, I put it to the House that it is not in order to carry on the debate on this issue.

ಶ್ರೀ ಕಾಗೋಡು ತಿಮ್ಮಪ್ಪ.—ಶ್ರೀಮಾನ್ ಜನ್ನಬನಪ್ಪನವರು ಹೇಳಿದ್ದನ್ನು ಸಂಪೂರ್ಣವಾಗಿ ನಾನು ಒಪ್ಪುತ್ತೇನೆ. ಚರ್ಚೆಮಾಡುವುದಕ್ಕೆ ಅವಕಾಶವಿಲ್ಲ. ನಾನು ಸ್ಪಷ್ಟೀಕರಣ ಕೇಳುತ್ತೇನೆ, ಸೆಕ್ಷನ್ 302ರ ಪ್ರಕಾರ ಕೇಸನ್ನು ರಿಜಿಸ್ಟರ್ ಮಾಡಿದರೆ ಅಪರಾಧಿಗಳನ್ನು ಜೈಲಿನಲ್ಲಿ ಇಟ್ಟುಕೊಳ್ಳಬೇಕು, ಕಸ್ಟಡಿಯಲ್ಲಿ ಇಟ್ಟುಕೊಳ್ಳಬೇಕು. Anticipatory Bail grant ಮಾಡುವುದಕ್ಕೆ ಕ್ರಿಮಿನಲ್ ಪ್ರೊಸಿಜರ್ ಕೋಡ್ ಪ್ರಕಾರ ಅವಕಾಶವಿಲ್ಲ. ಎಫ್. ಐ. ಆರ್. ಅಲ್ಟರ್ ಮಾಡಿ ಸೆಕ್ಷನ್ 302 ಪ್ರಕಾರ ಕೇಸ್ ಹಾಕಿದರೆ ತಕ್ಷಣ ನಮ್ಮ ಮಾನ್ಯ ಹೈಕೋರ್ಟಿನ ಜಸ್ಟೀಸ್ ಚಂದ್ರಶೇಖರಯ್ಯನವರ ಜಡ್ಜ್‌ಮೆಂಟ್ ಇದೆ. ಸೆಕ್ಷನ್ 302 ಪ್ರಕಾರ ಅಪರಾಧಿಗಳನ್ನು ಕಸ್ಟಡಿಗೆ ತೆಗೆದುಕೊಂಡು ಮುಂದಿನ ಇನ್‌ವೆಸ್ಟಿಗೇಷನ್ ಮಾಡಲು ಅವಕಾಶವಿದೆ. ಕಾನೂನು ಪ್ರಕಾರ ಅವಕಾಶವಿದ್ದರೂ ಕೂಡ ಸೆಕ್ಷನ್ 302 ರ ಪ್ರಕಾರ ಕೇಸ್ ರಿಜಿಸ್ಟರ್ ಮಾಡಿಕೊಂಡು ಅಪರಾಧಿಗಳನ್ನು ಕಸ್ಟಡಿಗೆ ಏತಕ್ಕೆ ತೆಗೆದುಕೊಳ್ಳಲಿಲ್ಲ ? ಕಸ್ಟಡಿಗೆ ತೆಗೆದುಕೊಳ್ಳದಿದ್ದರೆ ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಅಂತಕವಾಗುತ್ತದೆ. ಅದಕ್ಕೆ ಉತ್ತರಬೇಕು.

Sri H. SIDDAVEERAPPA.—Hitherto I was keeping silent. Now I feel I must say a few words. I have been a member of the legislature for quite a number of years this kind of atmosphere we are seeing only now for the first time. At this rate, where are we going ? Personal recriminations and so on—what is this ? The Opposition is there to point out the defects of the Government and censure the Government if they have committed a mistake. ಎದುರು ಬದುರು ಕುಸ್ತಿಗೆ ನಿಂತುಕೊಂಡರೆ ಹೇಗೆ ! There are outsiders who are seeing this. Now Sri Chikke Gowda's name has been dragged in. I had gone to his constituency once and I have seen the love and affection they have for him and the high esteem in which they hold him.

Sri H. M. CHANNABASAPPA.—Madam, the accused were produced before the court and the court let them on bail. It was not an anticipatory bail. So, immediately it was converted into Section 302 and the police have moved the court immediately to cancel the bail. Therefore, there is nothing unlawful or doubtful about it.

ಶ್ರೀ ಎಚ್. ಡಿ. ದೇವೇಗೌಡ.—ಚೀಫ್ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಬೇಲನ್ನು ಆರ್ಡರ್ ಮಾಡಿದ್ದಾರೆ. ಅದನ್ನು ಮಾಡುವಾಗ ಪೋಲೀಸಿನವರು ಮೊದಲನೇ ದಿವಸವೇ ಕರ್ತವ್ಯಲೋಪ ಮಾಡಿಕೊಂಡಿದ್ದಾರೆ. ಪೋಲೀಸ್ ಕಸ್ಟಡಿಗೆ ಅವರು ಕೇಳಲಿಲ್ಲ, ಜುಡಿಷಿಯಲ್ ಕಸ್ಟಡಿಗೆ ಮಾತ್ರ ಕೇಳಿದರು. 324ರ ಪ್ರಕಾರ ಕೇಸು ರಿಜಿಸ್ಟರ್ ಮಾಡಿಕೊಂಡಿದ್ದಾರೆ ಹೀಗೆಲ್ಲ ಹೇಳಿಕೊಂಡು ಬಂದಿದ್ದಾರೆ. ಅದರ ಮೇಲೆ ಕೋರ್ಟನ್ನು ಸಾಕಷ್ಟು ಕನ್‌ವಿನ್ಸ್ ಮಾಡುವುದಕ್ಕೆ ಹೋಗಿಲ್ಲ. ಪುನಃ ಬೇಲ್ ಕ್ಯಾನ್ಸೆಲ್ ಮಾಡುವುದಕ್ಕೆ ಕೇಳಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಯಾರು ಪ್ರಥಮ ಹಂತದಲ್ಲಿ ಇನ್‌ವೆಸ್ಟಿಗೇಟ್ ಮಾಡಿದ್ದಾರೆ ಅವರು ಎಂದರೆ ಸಬ್‌ಇನ್ಸ್‌ಪೆಕ್ಟರು ಮತ್ತು ಇನ್‌ಸ್ಪೆಕ್ಟರು ಸರಿಯಾದ ರೀತಿಯಲ್ಲಿ ತನಿಖೆ ನಡೆಸಿಲ್ಲ ಎಂದು ಮೊದಲ ನೋಟಕ್ಕೆ ಕೋರ್ಟ್ ಆರ್ಡರ್ ಪ್ರಕಾರ ಭಾವನೆ ಬರುತ್ತದೆ. ಆದ್ದರಿಂದ ಈ ಮೊಕದ್ದಮೆಯನ್ನು ಇನ್‌ವೆಸ್ಟಿಗೇಟ್ ಮಾಡುವುದಕ್ಕೆ ಎಸ್. ಪಿ. ಅವರನ್ನು ನೇಮಕ ಮಾಡಿ ಮೊಕದ್ದಮೆಯನ್ನು ತನಿಖೆ ಮಾಡಿಸಿ ಸಂಬಂಧಪಟ್ಟವರಿಗೆ ಶಿಕ್ಷೆ ಮಾಡಿಸುವುದಕ್ಕೆ ಸರ್ಕಾರ ಆದೇಶ ಕೊಡುತ್ತದೆಯೇ ?

Sri H. M. CHANNABASAPPA.—I have time and again said that it is not the intention of Government to create the least doubt in the mind of anybody in the matter of administration of justice. It is our intention that the culprits whoever they may be must be located prosecuted and dealt with under the law. As pointed out by the

Hon. the Leader of the Opposition, if there is any lapse we will certainly look into it and I can assure the House that we will certainly spare no pains to see that the offenders are booked and punished.

ಅಧ್ಯಕ್ಷರು.—ಮಾನ್ಯ ವಿದ್ಯಾಮಂತ್ರಿಗಳು ಮೇಲ್ಮನೆಗೆ ಹೋಗಿದ್ದಾರೆ. ಶ್ರೀ ಬೆಟ್ಟಸ್ವಾಮಿ ಗೌಡರ ನೂಚನೆಯನ್ನು ನಾಳೆ ತೆಗೆದುಕೊಳ್ಳೋಣ.

Notices given under Rule 312.

(i) *re* : **death of one Narayana Shetty at Doddikoppa**

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ರೂಲ್ 312ರ ಪ್ರಕಾರ ಸೊರಬ ತಾಲ್ಲೂಕು ದೊಡ್ಡಿಕೊಪ್ಪ ಗ್ರಾಮದಲ್ಲಿ ಒಬ್ಬ ವ್ಯಕ್ತಿ ಗುಂಡಿನಿಂದ ಕೊಲೆಯಾಗಿರತಕ್ಕ ವಿಚಾರವಲ್ಲಿ ಒಂದು ವಿಷಯವನ್ನು ಕಳುಹಿಸಿದೆ ನೆ. ಇದು ಬಹಳ ಮುಖ್ಯವಾದ ವಿಚಾರ. ಇದು ನಾಲ್ಕನೇ ತಾರೀಖು ನಡೆದಂಥ ಘಟನೆ. ಗುಂಡಿನಿಂದ ಹೊಡೆದು ನಾರಾಯಣ ಶೆಟ್ಟಿ ಎಂಬುವವರು ಸತ್ತು ಹೋಗಿದ್ದಾರೆ. ರಾತ್ರಿ 10 ಗಂಟೆ ಸಮಯದಲ್ಲಿ ಗುಂಡಿನಿಂದ ಹೊಡೆದುದನ್ನು ನೋಡಿದವರಿದ್ದಾರೆ.

ಅಧ್ಯಕ್ಷರು.—ಈ ಪ್ರಕರಣ ನಡೆದಿದ್ದು ನಾಲ್ಕನೇ ತಾರೀಖು. ಅಸೆಂಬ್ಲಿ ಪ್ರಾರಂಭವಾಗಿದ್ದು 10ನೇ ತಾರೀಖು. ಇಲ್ಲಿಯವರೆಗೆ ತಾವು ಸುಮ್ಮನಿದ್ದು ಇಂದು ಬೆಳಿಗ್ಗೆ 11-45ರಲ್ಲಿ ನೋಟೀಸ್ ಕೊಟ್ಟು ಇದು ಬಹಳ ಮುಖ್ಯವಾದುದು ಎಂದು ಹೇಳಿದರೆ ಹೇಗೆ ?

ಶ್ರೀ ಕಾಗೋಡು ತಿಮ್ಮಪ್ಪ.—ಮೊದಲೇ ತಿಳಿದುಕೊಳ್ಳಲು ನಮಗೆ ಏನಾದರು ಟೆಲಿಪಿಷನ್ ಇದೆಯೇ ?

ಅಧ್ಯಕ್ಷರು.—ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ಕೂಡಲೇ ಉತ್ತರ ಕೊಡಲು ಸರ್ಕಾರದ ವರಿಗೆ ಹೇಗೆ ಸಾಧ್ಯ ? ಅವರ ಹತ್ತಿರ ಸಹ ಟೆಲಿಪಿಷನ್ ಇಲ್ಲ. ಮತ್ತು ಸರ್ಕಾರದವರು ಥೂ ಮಂತ್ರ ಗಾಳಿ ಹಂಕ ಉತ್ತರ ಕೊಡಲು ಸಾಧ್ಯವೇ ? ತಾವು ಕಳುಹಿಸಿರುವ ನೋಟೀಸನ್ನು ನಮ್ಮ ಸೆಕ್ರೆಟೇರಿಯಟ್‌ನಿಂದ ಸರ್ಕಾರಕ್ಕೆ ಕಳಿಸಿಕೊಡುತ್ತೇನೆ. ಅದಕ್ಕೆ ಒಂದು ಕಾಲವನ್ನು ನಿಗದಿ ಮಾಡಿದ ಮೇಲೆ ತಾವು ಅವನ್ನು ಪ್ರಸ್ತಾಪ ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ.—ಇದು ಬಹಳ ಮುಖ್ಯವಾದುದು. ಈಗ ತನಿಖೆ ನಡೆಯುತ್ತಿದೆ. ಆದರೆ ಸೆಕ್ಷನ್ 302ರ ಪ್ರಕಾರ ಕೇಸನ್ನು ರಿಜಿಸ್ಟರ್ ಮಾಡಿಕೊಳ್ಳದೆ ಸೆಕ್ಷನ್ 304 (ಎ) ಪ್ರಕಾರ ಕೇಸನ್ನು ರಿಜಿಸ್ಟರ್ ಮಾಡಿದ್ದಾರೆ.

ಅಧ್ಯಕ್ಷರು.—ನಾಳೆ ಆದನ್ನು ತಾವು ಪ್ರಸ್ತಾಪ ಮಾಡಿ.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ನಾನು ಒಂದು ಕಾಲ್ ಅಟೆಂಷನ್ ನೋಟೀಸ್ ಕಳುಹಿಸಿದ್ದೆ.

ಅಧ್ಯಕ್ಷರು.—ಅದನ್ನು ಸಹ ಹಾಕಿಸುತ್ತೇನೆ

(ii) *re* : **non-arrest of alleged accused by name Sri H. C. Gopalashetty in a Murder Case**

†ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಸೆಕ್ಷನ್ 312ರಪ್ರಕಾರ ನಾನು ಇನ್ನೊಂದು ತಿಳಿವಳಿಕೆ ನೋಟೀಸನ್ನು ತಮಗೆ ಕಳಿಸಿದ್ದೇನೆ. ಅದು ಏನೆಂದರೆ, ಮಂಗಳೂರಿನಲ್ಲಿ ಭಾಸ್ಕರ ಸೇವಿತ ಎಂಬುವರ ಕೊಲೆಗೆ ಸಂಬಂಧಪಟ್ಟಿದ್ದು. ಅವರ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆ ನಡೆದಿದೆ. ಆ ರೀತಿ ಚರ್ಚೆಯಾಗುವಾಗ ಸರ್ಕಾರದವರು ಯಾರು ತಪ್ಪಿತಸ್ಥರಿದ್ದಾರೆ, ಅವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ಭರವಸೆಯನ್ನು ಕೊಟ್ಟಿದ್ದರು. ಸೆಕ್ಷನ್ 302ರ ಪ್ರಕಾರ 3 ಜನರ ವಿರುದ್ಧ ಕೇಸನ್ನು ರಿಜಿಸ್ಟರ್ಡ್ ಮಾಡಿಕೂಡಿದ್ದರೂ ಸಹ ಇಲ್ಲಿಯವರೆಗೆ ಕೇವಲ ರಾಘವ ಕೋಟಿಯಾನ್ ಎಂಬ ವ್ಯಕ್ತಿಯನ್ನು ಮಾತ್ರ ದಸ್ತಗಿರಿ ಮಾಡಿದ್ದಾರೆ. ಉಳಿದವರನ್ನ ಇನ್ನೂ ದಸ್ತಗಿರಿ ಮಾಡಿಲ್ಲ. ಎಚ್ ಸಿ. ಗೋಪಾಲಶೆಟ್ಟಿ ಎಂಬಾತನನ್ನು ಇನ್ನೂ ಅರೆಸ್ಟ್ ಮಾಡಿಲ್ಲ. ಎಫ್. ಐ. ಆರ್ ಪ್ರಕಾರ ಕೇಸನ್ನು ರಿಜಿಸ್ಟರ್ ಮಾಡಿಕೊಂಡ ಮೇಲೆ ಈ ಕೇಸಿಗೆ ಒಳಪಟ್ಟ ಪೋಲೀಸು ಅಧಿಕಾರಿಯನ್ನು ಅರೆಸ್ಟ್ ಮಾಡುವಲು ಕಾರಣವೇನು ? ಇದಕ್ಕೆ ಸರ್ಕಾರದವರು ಉತ್ತರ ಹೇಳಬೇಕಾಗುತ್ತದೆ.

Sri H M. CHANNABASAPPA.—I fail to understand. The Corps of Detectives are there on the spot investigating. Can I give an indication that they must arrest this man or that man ?